**<u>ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಚಿಂತಾಮಣಿ</u>**

**<u>ಸಿ.ಸಿ.ನಂ : 299/2017</u>**

ಫಿರ್ಯಾದುದಾರರು: ಸರ್ಕಾರ ಪರವಾಗಿ: ಚಿಂತಾಮಣಿ ನಗರ ಪೊಲೀಸ್ ಠಾಣೆ

ವಿರುದ್ಧ

ಆರೋಪಿತರು: ಮುನಿಯಪ್ಪ ಬಿನ್ ಲೇಟ್ ನಾರಾಯಣಪ್ಪ
**58** ವರ್ಷ, ವಾಸ: ಚಿಂತಾಮಣಿ ನಗರ, ಚಿಕ್ಕಬಳ್ಳಾಪುರ ಜಿಲ್ಲೆ.
ಖಾಯಂ ವಾಸ: ಇಮ್ರೆಡ್ಡಿಹಳ್ಳಿ ಗ್ರಾಮ, ಚಿಂತಾಮಣಿ ತಾಲ್ಲೂಕು

## <u>ದೋಷಾರೋಪಣೆ</u>

ಶ್ರೀಮತಿ ಶ್ರೀಶೈಲಜಾ ಹೆಚ್ ವಿ, ಎಂ.ಎ., ಎಲ್.ಎಲ್.ಎಂ, ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಚಿಂತಾಮಣಿ, ಆದ ನಾನು ಆರೋಪಿಯಾದ ನಿಮ್ಮ ಮೇಲೆ ಆರೋಪ ಹೊರಿಸುವುದೇನೆಂದರೆ,

ಮೊದಲನೆಯದಾಗಿ ಚಿಂತಾಮಣಿ ನಗರದಲ್ಲಿ ಆರೋಪಿಯಾದ ನಿಮ್ಮಿಂದ ಚಾಸಾ-1 ರವರು 2014 ನೇ ಇಸವಿಯಲ್ಲಿ ಸಾಲವಾಗಿ ರೂ.30,000/-ಗಳನ್ನು ತೆಗೆದುಕೊಂಡು ಶೇಕಡಾ 5 ರಂತೆ ಬಡ್ಡಿ ಹಣವನ್ನು ಕಟ್ಟಿಕೊಂಡು ಬಂದಿದ್ದು 4-5 ತಿಂಗಳು ಬಡ್ಡಿ ಹಣ ಕಟ್ಟಲು ಸಾಧ್ಯವಾಗದೇ ಇದ್ದುದ್ದರಿಂದ ಆರೋಪಿಯಾದ ನೀವು ಚಾಸಾ-1 ರವರ ಮನೆಯ ಬಳಿ ರಾತ್ರಿ ವೇಳೆಯಲ್ಲಿ ಹೋಗಿ ತನ್ನ ಬಳಿ ತೆಗೆದುಕೊಂಡಿದ್ದ ರೂ.30,000/- ಹಾಗೂ ಬಡ್ಡಿ ಸೇರಿ ರೂ.60,000/- ಗಳಾಗಿರುತ್ತೆ ಅಂತ ಕೊಡಬೇಕೆಂದು ಗಲಾಡಿ ಮಾಡಿ ಬಂದಿದ್ದು, ಆ ಮೂಲಕ ನೀವು ಕರ್ನಾಟಕ ದುಬಾರಿ ಬಡ್ಡಿ ನಿಷೇದ ಕಾಯಿದೆ ಕಲಂ 3, 4 ರಡಿಯಲ್ಲಿ ಅಪರಾಧ ಮಾಡಿರುವುದಾಗಿ ಆಪಾದಿಸಲಾಗಿದೆ.

ಎರಡನೆಯದಾಗಿ ಚಿಂತಾಮಣಿ ನಗರದಲ್ಲಿ ಆರೋಪಿಯಾದ ನಿಮ್ಮಿಂದ ಚಾಸಾ-1 ರವರಿಗೆ ಬಡ್ಡಿ ಹಣದ ವಿಚಾರದಲ್ಲಿ ಮಾನಸಿಕವಾಗಿ ತೊಂದರೆ ನೀಡಿ ನಾನು ನಿಮ್ಮ ಮನೆಯ ಬಳಿ ಸಾಲ ಕೇಳಲು ಬಂದಾಗ ನನ್ನನ್ನು ಬೈದಿರುವೆ ಹಾಗೂ ನನಗೆ ಇನ್ನು ಬಡ್ಡಿ ಹಣವು ಬರಬೇಕು ಅಂತ ಹೇಳಿ ಚಾಸಾ-1 ರವರ ಚೆಕ್ಕನ್ನು ಅಪಹರಿಸಿ ಅದರಲ್ಲಿ ಒಂದು ಚೆಕ್ಕನ್ನು 6 ಲಕ್ಷ ರೂ.ಗಳಿಗೆ ಕೋರ್ಟಿಗೆ ಹಾಕಿದ್ದು ಇನ್ನು ಉಳಿದ 9 ಚೆಕ್ಕುಗಳನ್ನು 60 ಲಕ್ಷಕ್ಕೆ ಬ್ಯಾಂಕಿಗೆ ಹಾಕಿ, ಕೋರ್ಟ್ ಗೆ ಹಾಕಿ ನೀನು ಆತ್ಮಹತ್ಯೆ ಮಾಡಿಕೊಳ್ಳಬೇಕೆಂದು ಪ್ರೇರೇಪಿಸಿದ್ದು, ಆ ಮೂಲಕ ನೀವು ಕರ್ನಾಟಕ

ದುಬಾರಿ ಬಡ್ಡಿ ನಿಷೇದ ಕಾಯಿದೆ ಕಲಂ **9** ರಡಿಯಲ್ಲಿ ಅಪರಾಧ ಮಾಡಿರುವುದಾಗಿ ಆಪಾದಿಸಲಾಗಿದೆ.

ಮೂರನೆಯದಾಗಿ ದಿನಾಂಕ **06/04/2015** ರಂದು ಸಂಜೆ ಸುಮಾರು **5.00** ಗಂಟೆ ಸಮಯದಲ್ಲಿ ಚಿಂತಾಮಣಿ ನಗರ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಚಿಂತಾಮಣಿ ನಗರದ ತಾಲ್ಲೂಕು ದಂಡಾಧಿಕಾರಿಗಳ ಕಛೇರಿಯ ಆವರಣದಲ್ಲಿ ಆರೋಪಿಯಾದ ನೀವು ಬಡ್ಡಿ ಹಣದ ವಿಚಾರವಾಗಿ ಚಾಸಾ-**1** ರವರ ಮೇಲೆ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ನೆಮ್ಮದಿಗೆ ಶಾಂತಿ ಭಂಗವನ್ನುಂಟು ಮಾಡಿ, ಆ ಮೂಲಕ ನೀವು ಭಾರತ ದಂಡ ಸಂಹಿತೆ ಕಲಂ **504** ರಡಿಯಲ್ಲಿ ಅಪರಾಧ ಮಾಡಿರುವುದಾಗಿ ಆಪಾದಿಸಲಾಗಿದೆ.

ನಾಲ್ಕನೆಯದಾಗಿ ಅದೇ ದಿನ, ಅದೇ ಸ್ಥಳ ಮತ್ತು ಅದೇ ಸಮಯದಲ್ಲಿ ಮೇಲ್ಕಂಡ ಆರೋಪಿಯಾದ ನೀವು ಚಾಸಾ-**1** ರವರಿಗೆ "ತನಗೆ ಬಡ್ಡಿ ಹಣ ಕೊಡದೇ ಇದ್ದರೇ ನಿನಗೆ ಒಂದು ಗತಿ ಕಾಣಿಸುತ್ತೇನೆ" ಎಂದು ಪ್ರಾಣ ಬೆದರಿಕೆ ಹಾಕಿ, ಆ ಮೂಲಕ ನೀವು ಭಾರತ ದಂಡ ಸಂಹಿತೆ ಕಲಂ **506** ರಡಿಯಲ್ಲಿ ಅಪರಾಧ ಮಾಡಿರುವುದಾಗಿ ಆಪಾದಿಸಲಾಗಿದೆ.

(ಆರೋಪಿಯ ವಿಚಾರಣೆಯನ್ನು ನನ್ನ ಹಾಜರಾತಿಯಲ್ಲಿ ತೆಗೆದುಕೊಂಡು ಆಪಾದನೆಗಳನ್ನು ಅವರಿಗೆ ವಿವರವಾಗಿ ಓದಿ ಹೇಳಿದ ಮೇಲೆ ಅದನ್ನು ನನ್ನ ವೈಯಕ್ತಿಕ ಸುನಾವಣೆಯಲ್ಲಿ ದಾಖಲಿಸಿದ್ದು ಆಪಾದನೆಗಳು ಪೂರ್ಣಶಃ ಸರಿಯಾದ ಹೇಳಿಕೆಯಾಗಿವೆ.)

ದಿನಾಂಕಃ **08/12/2022**

ಸಹಿ/-
( ಶ್ರೀ ಶೈಲಜಾ ಹೆಚ್. ವಿ )
ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ ನ್ಯಾಯಾಲಯ.
ಚಿಂತಾಮಣಿ